ಒ ಎಸ್ ನಂ.147/2014

ಪಿ ಡಬ್ಲ್ಯೂ - 1

ದಿನಾಂಕಃ 17-01-2018 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ

ನಿಪಿ-1ನ್ನು ಮಾಡಲಾಗಿದೆ ಎಂದು ಹೇಳಲಾಗುವ ದಿನಾಂಕದಂದು ದಾವಾ ಸ್ವತ್ತಿಗೆ ಎಷ್ಟು ಬಾಡಿಗೆ ಬರುತ್ತಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ಬಡಾವಣೆಯಲ್ಲಿ ಬಾಡಿಗೆ ಮನೆಗಳು ಇರುತ್ತವೆ. ಪ್ರತಿವಾದಿಗಳು ನನ್ನ ಸಂಬಂಧಿಕರಾದ್ದರಿಂದ ಅದರ ಆಧಾರದ ಮೇಲೆ ಯಾವುದೇ ಪ್ರತಿಫಲ ಅಪೇಕ್ಷೆ ಇಲ್ಲದೇ ದಾವಾ ಸ್ವತ್ತನ್ನು ನನ್ನ ಸ್ವಾಧೀನಕ್ಕೆ ಸ್ವಲ್ಪ ದಿನಗಳ ಕಾಲ ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ. ಸ್ಟಾಂಪ್ ಪೇಪರ್‌ನ್ನು ಖರೀದಿಸುವ ಮುಂಚೆ ಸಂಬಂದಪಟ್ಟ ಅರ್ಜಿಯನ್ನು ಭರ್ತಿ ಮಾಡಿ ಕೊಟ್ಟ ನಂತರ ಸ್ಟಾಂಪ್ ಪೇಪರ್‌ನ್ನು ಕೊಡುವ ಕಾನೂನು ಇದ್ದು, ಸದರಿ ಅರ್ಜಿಯನ್ನು ಯಾರು ಬರೆದಿರುತ್ತಾರೆಂದರೆ ಹನುಮಂತಯ್ಯ ರವರು ಬರೆದಿರುತ್ತಾರೆ. ಸದರಿ ಹನುಮಂತಯ್ಯ ರವರು ನಿಪಿ-1 ರ ವ್ಯವಹಾರಕ್ಕೆ ಸೇರಿರುತ್ತಾರಾ ಎಂದರೆ ಇಲ್ಲ ಎನ್ನುತ್ತಾರೆ.

ನಿಪಿ-1 ರ 4ನೇ ಪುಟದಲ್ಲಿ ಕ್ರಯ ಕಾರಾರು ಪತ್ರ ಬರೆದುಕೊಡುವವರ ಮುಂದೆ ಯಾರು ಸಹಿ ಮಾಡಿಲ್ಲ ಎಂದರೆ ಪಕ್ಕದಲ್ಲಿ ಬರೆದಿರುತ್ತಾರೆ. ನಿಡಿ-1 ರಲ್ಲಿ ಸೂಚಿಸಿರುವ ಸ್ಥಳದಲ್ಲಿಯೇ ಸಹಿ ಮಾಡಿಸಿಕೊಳ್ಳಬೇಕೆಂದು ಪತ್ರ ಬರಹಗಾರರು ನಿಮಗೆ ತಿಳಿಸಿರಲಿಲ್ಲವಾ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ನನ್ನ ಚಿಕ್ಕಪ್ಪನಿಗೆ ಗೊತ್ತು ಎನ್ನುತ್ತಾರೆ. 1ನೇ ಪ್ರತಿವಾದಿಯ ಗಂಡ ಗಂಗಾಧರಯ್ಯ ನ ನಿಜವಾದ ಸಹಿ ಇರುವ ಬೇರೊಂದು ದಾಖಲಾತಿಯನ್ನು ನೀವು ಹಾಜರು ಪಡಿಸಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ.

ನಿಪಿ-1 ನ್ನು ಬರೆಯುವ ಮುಂಚೆ ಯಾವ ಯಾವ ಮೂಲ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೀರಾ ಎಂದರೆ ಪಹಣಿ ಮತ್ತು ಮೂಲ ನೊಂದಣಿ ಪತ್ರವನ್ನು ಗಂಗಾಧರಯ್ಯ ಹಾಜರು ಪಡಿಸಿರುತ್ತಾರೆ. ಸದರಿ ದಾಖಲಾತಿಗಳನ್ನು ನನ್ನ ವಶಕ್ಕೆ ಪಡೆದುಕೊಳ್ಳಲು ತೊಂದರೆ ಇತ್ತಾ ಎಂರದೆ ಪ್ರತಿವಾದಿ ನನ್ನ ಸಂಬಂಧಿಕರಾದ ಕಾರಣ ಅವರು ಕೊಡಲಿಲ್ಲ ನಾನು ಕೇಳಲಿಲ್ಲ ಎನ್ನುತ್ತಾರೆ.

1ನೇ ಪ್ರತಿವಾದಿಯು ನನ್ನ ತಂದೆಯ ಸೋದರ ಸಂಬಂಧಿಯಾಗಿದ್ದು ಆ ಕಡೆಯಿಂದ ಗಂಗಾಧರಯ್ಯ ನನ್ನ ದೊಡ್ಡಪ್ಪನಾಗಬೇಕು. ನನ್ನ ನೋಟೀಸಲ್ಲಿ ಆಗಲೀ ನನ್ನ ವಾದ ಪತ್ರದಲ್ಲಿ ಆಗಲೀ ನಿಪಿ-1 ರಲ್ಲಿ ಆಗಲೀ ಸಂಬಂಧದ ಬಗ್ಗೆ ವಿವರಣೆ ಇಲ್ಲ ಎಂದರೆ ಸರಿ. ನನ್ನ ವಾದ ಪತ್ರದ 3ನೇ ಪುಟದ ಮೊದಲನೇ ಪ್ಯಾರಾದಲ್ಲಿ ಹೇಳಿರುವ ಅಂಶಗಳು ನಿಪಿ-1 ರಲ್ಲಿ ಇಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನ ಸ್ವಾಧೀನವನ್ನು ಸಂಬಂಧದ ಆಧಾರದ ಮೇಲೆ ಬಿಟ್ಟುಕೊಟ್ಟಿರುತ್ತಾರೆ ಹೊರತು ನಿಪಿ-1 ರ ಆಧಾರದ ಮೇಲೆ ಅಲ್ಲ ಎಂರದೆ ಸರಿಯಲ್ಲ. ನಿಪಿ-1 ರಲ್ಲಿರುವ ಪ್ರತಿವಾದಿಗಳ ಸಹಿ ಮತ್ತು ಗಂಗಾಧರಯ್ಯನ ಸಹಿಯನ್ನು ಕೇಸಿಗಾಗಿ ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ. ನಿಪಿ-1ಕ್ಕೆ ಪ್ರತಿವಾದಿಗಳ ಒಪ್ಪಿಗೆಯಾಗಲೀ, ಅಥವಾ ಅವರ ಉಪಸ್ಥಿತಿಯಲ್ಲಿ ನಿಪಿ-1ನ್ನು ತಯಾರಿಸಿರುವುದಿಲ್ಲ ಬದಲಾಗಿ ನಾನೇ ಈ ಕೇಸಿಗಾಗಿ ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ. ದಾವಾ ಸ್ವತ್ತಿನ ಸ್ವಾಧೀನವನ್ನು ಬಿಟ್ಟುಕೊಡುವಂತೆ ನಿಪಿ-4 ರ ರೀತಿಯ ನೊಟೀಸ್ ಕೊಟ್ಟು ಕೇಳಿದಾಗ ಸದರಿ ದಾವಾವನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ನಿಪಿ1ನ್ನು ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಹಾಕಿರುತ್ತೇನೆಂದರೆ ಸರಿಯಲ್ಲ. ದಾವಾ ಸ್ವತ್ತಿನ ಸ್ವಾಧೀನವನ್ನು ನಾನೇ ಉಳಿಸಿಕೊಳ್ಳುವ ಉದ್ದೇಶದಿಂದ ನಿಪಿ-1ನ್ನು ಸೃಷ್ಟಿಸಿ ಈ ದಾವೆಯನ್ನು ಹಾಕಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ

(ಉಖ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒಪ್ಪಿದ್ದಾರೆ,

2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮಾಗಡಿ.